**<u>ಸಾಕ್ಷಿಯನ್ನು ದಿನಾಂಕ 28.7.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ವಿ ವಕೀಲರಿಂದಃ</u>

ನಾನು ದಾವಪತ್ರದಲ್ಲಿ ಹೇಳಿರುವ ವಿಚಾರವನ್ನು ತಿಳಿದುಕೊಂಡಿರುವುದಿಲ್ಲ. ಲಿಖಿತ ಹೇಳಿಕೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಲಿಖಿತ ಹೇಳಿಕೆಯಲ್ಲಿ ಬರೆಸಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ವಾದಿಯ ಹೆಸರಿಗೆ ದಾವಆಸ್ತಿಯ ಖಾತೆ ಬದಲಾವಣೆ ಆಗಿರುವುದನ್ನು ಪ್ರಶ್ನಿಸಿ ಹುಣಸೂರಿನ ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ವಾದಿಯ ಹೆಸರಿಗೆ ಆಗಿರುವ ಖಾತೆ ಬದಲಾವಣೆಯ ಎಂ.ಆರ್ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಹುಣಸೂರಿನ ಎ.ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯ ಸಂಖ್ಯೆ 12/2021 ಆಗಿರುತ್ತದೆ. ಸದರಿ ಮೇಲ್ಮನವಿಯನ್ನು ಈ ದಾವೆ ಸಲ್ಲಿಸಿದ ನಂತರ ಹಾಕಿರುತ್ತೇನೆ. ಯಾವ ದಿನಾಂಕ ಮತ್ತು ವರ್ಷ ಎಂದು ಮರೆತು ಹೋಗಿರುತ್ತೇನೆ. ಸದರಿ ಮೇಲ್ಮನವಿಯಲ್ಲಿ ವಿಚಾರಣೆ ಆಗಿರುವುದಿಲ್ಲ. ಅದು ತನಿಖೆಗೆ ಬಾಕಿ ಇರುತ್ತದೆ. ಅದರ ಮುಂದಿನ ವಿಚಾರಣೆ ದಿನಾಂಕ 18.7.2023 ಆಗಿರುತ್ತದೆ. ಈ ದಿನದ ತಾರೀಕು 28.7.2023 ಆಗಿರುತ್ತದೆ. ದಿನಾಂಕ 18.7.2023 ರಿಂದ ಮುಂದಿನ ದಿನಾಂಕ ಏನು ಎಂದು ನನಗೆ ಗೊತ್ತಿರುವುದಿಲ್ಲ. ದಿನಾಂಕ 5.7.2023 ರಂದು ವಾದಿಯು ಸದರಿ ಮೇಲ್ಮನವಿಗೆ ಸಂಬಂಧಪಟ್ಟ ದಾಖಲಾತಿಯನ್ನು ಹಾಜರುಪಡಿಸಿ ಎಂದು ನೋಟಿಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟಿಸಿಗೆ ನನ್ನ ವಕೀಲರು ದಿನಾಂಕ 14.7.2023 ರಂದು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ತಕರಾರಿನಲ್ಲಿ ಹೇಳಿರುವ ವಿಚಾರವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಸದರಿ ತಕರಾರಿನಲ್ಲಿ ನಾನು ಉಪವಿಭಾಗಾಧಿಕಾರಿಗಳ ಮುಂದೆ ಸಲ್ಲಿಸಿರುವ ಮೇಲ್ಮನವಿಯನ್ನು ಸಿವಿಲ್ ದಾವೆ ತನಿಖೆಗೆ ಬಾಕಿ ಇರುವುದರಿಂದ ಹಿಂದಿರುಗಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಮೇಲೆ ದಿನಾಂಕ 18.7.2023 ರಂದು ಮೇಲ್ಮನವಿಯ ಸುನಾವಣೆ ಇರುತ್ತದೆ ಎಂದು ಹೇಳಿದ್ದು, ತಕರಾರಿನಲ್ಲಿ ಸದರಿ ಮೇಲ್ಮನವಿಯನ್ನು ಹಿಂದಿರುಗಿಸಿರುತ್ತಾರೆ ಎಂದು ಹೇಳಿದ್ದು, ಎರಡರಲ್ಲಿ ಯಾವುದು ಸತ್ಯ ಎಂದರೆ ಸಾಕ್ಷಿದಾರರು ಮೇಲ್ಮನವಿಯನ್ನು ಹಿಂದಿರುಗಿಸಿರುವುದು ಸತ್ಯ ಎನ್ನುವರು.

ನಿಡಿ7 ರಲ್ಲಿ ಬಸಮ್ಮ (ಯಜಮಾನತಿ, ಪೌತಿ), ಸಣ್ಣಪ್ಪ (ಮಗ, ಪೌತಿ) ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ನಿಡಿ7 ರಲ್ಲಿ ಕಾಣಿಸಿರುವ ಸಣ್ಣಪ್ಪ ನನ್ನ ತಾಯಿಯ ತಂಗಿಯ ಗಂಡ ಆಗಿರುತ್ತಾರೆ. ನನ್ನ ತಾಯಿಯ ತಂಗಿಯ ಹೆಸರು ಗುರುಮಲ್ಲಮ್ಮ ಆಗಿರುತ್ತದೆ. ಸದರಿ ಸಣ್ಣಪ್ಪನಿಗೂ ವಾದಿ ಕೆಂಡಗಣ್ಣಪ್ಪನಿಗೂ ಏನು ಸಂಬಂಧ ಎಂದರೆ ಸಾಕ್ಷಿದಾರರು ಸಣ್ಣಪ್ಪನ ಮೊದಲನೇ ಮಗ ಮರಿಸ್ವಾಮಪ್ಪ ಆತನ ಮಗ ಕೆಂಡಗಣ್ಣಪ್ಪ ಆಗಿರುತ್ತಾನೆ. ಸಣ್ಣಪ್ಪನ 2 ನೇ ಹೆಂಡತಿ ಗುರುಮಲ್ಲಮ್ಮ ಎಂದು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ನಿಡಿ9 ದಾಖಲೆಯನ್ನು ನೀಡಿರುತ್ತೇನೆ. ನಿಡಿ9 ರಲ್ಲಿ ಕ್ರಮ ಸಂಖ್ಯೆ 530 ರಿಂದ 532, ಮನೆ ನಂ. 139 ಮಾತ್ರ ಎಂದು ನಮೂದರು ಇರುತ್ತದೆ ಎಂದರೆ ಸರಿ. ಕ್ರಮಸಂಖ್ಯೆ 530 ಲ್ಲಿ ಕಂಡು ಬರುವ ಗುರುಮಲ್ಲಮ್ಮ ನನ್ನ

ಚಿಕ್ಕಮ್ಮ ಎಂದರೆ ಸರಿ. ಸದರಿ ಗುರುಮಲ್ಲಮ್ಮ ನನ್ನ ತಾಯಿ ಚಿಕ್ಕಾಲಮ್ಮನ ತಂಗಿ ಎಂದರೆ ಸರಿ. ನಿಡಿ9 ರಲ್ಲಿ ಗುರುಮಲ್ಲಮ್ಮನ ವಿವರವನ್ನು ನಮೂದಿಸಿರುತ್ತಾರೆ ಎಂದರೆ ಸರಿ. ನಿಡಿ9 ರಲ್ಲಿ ಗುರುಮಲ್ಲಮ್ಮನ ಗಂಡನ ಹೆಸರು ಪುಟ್ಟತ್ತಪ್ಪ ಎಂದು ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಸಣ್ಣಪ್ಪ ತೀರಿಕೊಂಡ ನಂತರ ಪುಟ್ಟತ್ತಪ್ಪರವರನ್ನು ಗುರುಮಲ್ಲಮ್ಮ ಇಟ್ಟುಕೊಂಡಿದ್ದರು ಎನ್ನುವರು. ಸಣ್ಣಪ್ಪ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಕ್ರಮ ಸಂಖ್ಯೆ 531 ರಲ್ಲಿ ರಾಜಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅವರು ಗುರುಮಲ್ಲಮ್ಮನ ಮಗ ಎನ್ನುವರು. ಸದರಿ ರಾಜಪ್ಪನ ತಂದೆಯ ಹೆಸರು ಪುಟ್ಟತ್ತಪ್ಪ, ವಯಸ್ಸು 44, ಮನೆ ನಂದಿ 139 ಎಂದು ಇರುತ್ತದೆ ಎಂದರೆ ಸರಿ. ಕ್ರಮ ಸಂಖ್ಯೆ 532 ರಲ್ಲಿ ಪುಟ್ಟಮ್ಮ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅವರು ಗುರುಮಲ್ಲಮ್ಮನ ಮಗಳು ಎನ್ನುವರು. ಸದರಿ ಪುಟ್ಟಮ್ಮನ ಗಂಡನ ಹೆಸರು ಪುಟ್ಟತ್ತಪ್ಪ ಎಂದು ಇರುತ್ತದೆ ಎಂದರೆ ಸರಿ. ನಿಡಿ9 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸರಿ ಇರುತ್ತದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.